# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 957 (998)
2 ಸದಸ್ಯರ ಹೆಸರು : ಶ್ರೀ ಎನ್ ರವಿಕುಮಾರ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
3 ಉತ್ತರಿಸುವ ದಿನಾಂಕ: : 12-03-2026
4 ಉತ್ತರಿಸುವವರು : ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಜಿ.ಬಿ.ಎ ವ್ಯಾಪ್ತಿಯ ನಗರ ಸಭೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆರೋಗ್ಯಾಧಿಕಾರಿಗಳ ಸಂಖ್ಯೆ ಎಷ್ಟು: (ವಿಭಾಗವಾರು ವಿವರ ನೀಡುವುದು) | ಆರೋಗ್ಯಾಧಿಕಾರಿಗಳ ವಿವರಗಳನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ. |
| ಆ) | ಆರೋಗ್ಯಾಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳೇನು: (ವಿವರ ನೀಡುವುದು) | ಆರೋಗ್ಯಾಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |
| ಇ) | ಆರೋಗ್ಯಧಿಕಾರಿಗಳು ವೈದ್ಯಕೀಯ ಶಿಕ್ಷಣವನ್ನು ಹೊರತು ಪಡಿಸಿ ಯಾವ ರೀತಿ ತರಬೇತಿಯನ್ನು ಪಡೆದಿರುತ್ತಾರೆ: (ವಿವರ ನೀಡುವುದು) | ಆರೋಗ್ಯಧಿಕಾರಿಗಳು ದೈನಂದಿನ ಕಾರ್ಯಗಳನ್ನು ನಿರ್ವಹಿಸಲು ಅಗತ್ಯವಿರುವ K.C.S.R, C.C.A, K.F.C, K.T.P.P, R.T.I, Office Procedures ಇತ್ಯಾದಿ ತರಬೇತಿಗಳನ್ನು ಪಡೆದಿರುತ್ತಾರೆ. |
| ಈ) | ಆರೋಗ್ಯಾಧಿಕಾರಿಗಳು ಆಡಳಿತಾತ್ಮಕ ಹಾಗೂ ಕಾನೂನಾತ್ಮಕ ತರಬೇತಿಯನ್ನು ಪಡೆದಿರುತ್ತಾರೆಯೇ: ಇಲ್ಲವಾದಲ್ಲಿ ಕಾನೂನಾತ್ಮಕ ಮತ್ತು ಆಡಳಿತಾತ್ಮಕ ವಿಷಯಗಳನ್ನು ಒಳಗೊಂಡ ಟ್ರೇಡ್ ಲೈಸೆನ್ಸ್ ನೀಡುವ ಅಧಿಕಾರ ಯಾವ ನಿಯಮದ ಅನ್ವಯ ಜಿ.ಬಿ.ಎ ವ್ಯಾಪ್ತಿಯ ನಗರ ಸಭೆಗಳಲ್ಲಿ ಆರೋಗ್ಯಾಧಿಕಾರಿಗಳಿಗೆ ನೀಡಲಾಗಿದೆ: (ವಿವರ ನೀಡುವುದು) | ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ:ಬಿ12(1)ಪಿಆರ್ /394/21-22, ದಿನಾಂಕ:18-01-2022ರಂತೆ ಉದ್ದಿಮೆ ಪರವಾನಿಗೆ ಮಂಜೂರಾತಿ ಹಾಗೂ ರದ್ದುಗೊಳಿಸುವ ಅಧಿಕಾರವನ್ನು ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ರವರಿಗೆ ನೀಡಲಾಗಿರುತ್ತದೆ. |
| ಉ) | ಟ್ರೇಡ್ ಲೈಸೆನ್ಸ್ ಅರ್ಜಿ ಸಲ್ಲಿಸಿದ ಕೂಡಲೇ ಅದನ್ನು ತಿರಸ್ಕರಿಸುವ ಆರೋಗ್ಯಾಧಿಕಾರಿಗಳು ಮತ್ತು ಅದೇ ವ್ಯಕ್ತಿಯಿಂದ ಪುನ: ಅರ್ಜಿ ಸಲ್ಲಿಸಲು ಹೇಳಿ ಮತ್ತೆ ಅದೇ ಆರೋಗ್ಯಾಧಿಕಾರಿ ಲಂಚ ಪಡೆದು ಟ್ರೇಡ್ ಲೈಸೆನ್ಸ್ ಅನುಮತಿ ನೀಡುತ್ತಿರುವ ಕುರಿತು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದ್ದು, ಈ ಕುರಿತು ಸರ್ಕಾರದ ನಿಲುವೇನು? | ದೂರುಗಳು ಬಂದಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು. |

**ಸಂಖ್ಯೆ:ನಅಇ 56 ಬಿಬಿಎಲ್ 2026**

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**

## ಅನುಬಂಧ-1

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 957 (998)

| ಆರೋಗ್ಯಾಧಿಕಾರಿಗಳ ವಿವರ | | | |
|---|---|---|---|
| ಕ್ರ.ಸಂ. | ಜಿಬಿಎ/ ನಗರ ಪಾಲಿಕೆಗಳು | ಆರೋಗ್ಯಾಧಿಕಾರಿ - ಸಾರ್ವಜನಿಕ ಆರೋಗ್ಯ | ಆರೋಗ್ಯಾಧಿಕಾರಿ - ಕ್ಲಿನಿಕಲ್ |
| 1 | ಗ್ರೇಟರ್ ಬೆಂಗಳೂರು ಪ್ರಾಧಿಕಾರ | 1 | 1 |
| 2 | ಬೆಂಗಳೂರು ಕೇಂದ್ರ ನಗರ ಪಾಲಿಕೆ | 1 | 0 |
| 3 | ಬೆಂಗಳೂರು ಪೂರ್ವ ನಗರ ಪಾಲಿಕೆ | 1 | 0 |
| 4 | ಬೆಂಗಳೂರು ಪಶ್ಚಿಮ ನಗರ ಪಾಲಿಕೆ | 1 | 1 |
| 5 | ಬೆಂಗಳೂರು ಉತ್ತರ ನಗರ ಪಾಲಿಕೆ | 1 | 1 |
| 6 | ಬೆಂಗಳೂರು ದಕ್ಷಿಣ ನಗರ ಪಾಲಿಕೆ | 1 | 0 |
| | ಒಟ್ಟು | 6 | 3 |

**ಅನುಬಂಧ-2**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 957 (998)

**ಕ್ಲಿನಿಕಲ್ ವಿಭಾಗ:-**

1. ಆರೋಗ್ಯ ವೈದ್ಯಕೀಯ ಇಲಾಖೆಯ ವ್ಯಾಪ್ತಿಗೆ ಬರುವ ರೆಫರಲ್ ಮತ್ತು ಹೆರಿಗೆ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿದ್ದು, ಅದರ ಮೇಲ್ವಿಚಾರಣೆ, ಮಾರ್ಗದರ್ಶನ, ಕುಂದು-ಕೊರತೆಗಳ ಮತ್ತು ಆಡಳಿತಾತ್ಮಕ ನಿರ್ವಹಣೆ.
2. ರೆಫರಲ್ ಮತ್ತು ಹೆರಿಗೆ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು ಹಾಗೂ ಸಿಬ್ಬಂದಿಗಳ ಬಟವಾಡೆ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು.
3. ರೆಫರಲ್ ಮತ್ತು ಹೆರಿಗೆ ಆಸ್ಪತ್ರೆಗಳಿಗೆ ಸಂಬಂಧಿಸಿದಂತೆ, ಸಾರ್ವಜನಿಕರಿಂದ ಬಂದಂತಹ ದೂರುಗಳಿಗೆ ಸ್ಪಂದಿಸಿ, ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳುವುದು.
4. ಮಾಹಿತಿ ಹಕ್ಕು ಕಾಯ್ದೆ 2005ರ ಅಡಿಯಲ್ಲಿ, ರೆಫರಲ್ ಆಸ್ಪತ್ರೆಗಳಿಗೆ ಪ್ರಥಮ ಮೇಲ್ಮನವಿ ಪ್ರಾಧಿಕಾರಿಯಾಗಿರುತ್ತಾರೆ.
5. ಮೇಲಾಧಿಕಾರಿಗಳು ಸೂಚಿಸುವ ಇತರೆ ಕೆಲಸ-ಕಾರ್ಯಗಳನ್ನು ನಿರ್ವಹಿಸುವುದು.

**ಸಾರ್ವಜನಿಕ ಆರೋಗ್ಯ:-**

1. ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಮೇಲ್ವಿಚಾರಣೆ ಮಾಡುವುದು.
2. ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮತ್ತು ನಮ್ಮ ಕ್ಲಿನಿಕಲ್‌ಗಳ ಮುಖಾಂತರ ಸಾರ್ವಜನಿಕರಿಗೆ ನೀಡುತ್ತಿರುವ ಪ್ರಾಥಮಿಕ ಆರೋಗ್ಯ ಸೇವೆಗಳ ಮೇಲುಸ್ತುವಾರಿ ಮಾಡುವುದು.
3. ಜನನ ಮತ್ತು ಮರಣ ಪ್ರಕರಣಗಳ ನೋಂದಣಿ ಕಾರ್ಯದ ಮೇಲುಸ್ತುವಾರಿ ಮಾಡುವುದು.
4. ಇಂದಿರಾ ಕ್ಯಾಂಟೀನ್‌ಗಳ ಕಾರ್ಯನಿರ್ವಹಣೆಯ ಮೇಲುಸ್ತುವಾರಿ ಮಾಡುವುದು.
5. ಸೊಳ್ಳೆ ನಿಯಂತ್ರಣದ ಕಾರ್ಯದ ಮೇಲುಸ್ತುವಾರಿ ಮಾಡುವುದು.
6. ವಾಣಿಜ್ಯ ಉದ್ದಿಮೆಗಳಿಗೆ ಪರವಾನಿಗೆ ಮಂಜೂರು ಮಾಡುವುದು ಮತ್ತು ರದ್ದು ಮಾಡುವುದು ಹಾಗೂ ನವೀಕರಣ ಕಾರ್ಯದ ಮೇಲುಸ್ತುವಾರಿ ಮಾಡುವುದು.
7. ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ರೋಗಗಳ ನಿಯಂತ್ರಣ ಕಾರ್ಯದ ಮೇಲುಸ್ತುವಾರಿ ಮಾಡುವುದು.
8. ಜೈವಿಕ ತ್ಯಾಜ್ಯ ವಿಲೇವಾರಿ ಕಾರ್ಯದ ಮೇಲುಸ್ತುವಾರಿ ಮಾಡುವುದು.
9. ಪಾಲಿಕೆಯ ಆಡಳಿತಾತ್ಮಕ ಮತ್ತು ಕಾನೂನಾತ್ಮಕ ಕೆಲಸಗಳನ್ನು ನಿರ್ವಹಿಸುವುದು.
10. ಮೇಲಾಧಿಕಾರಿಗಳು ಸೂಚಿಸುವ ಇತರೆ ಕೆಲಸ-ಕಾರ್ಯಗಳನ್ನು ನಿರ್ವಹಿಸುವುದು.